

ಅರುಣ ಪಿ. ಭಟ್ಟ

## ವಾರಭವಿಷ್ಯ 23.01.2020ರಿಂದ 29.01.2020ರವರೆಗೆ




ವಿವೇಚನೆಯಿಂದ ಕಾರ್ಯಗಳಲ್ಲಿ ಪಾಲ್ಗೊಳ್ಳಿ. ಕೆಲವರನ್ನು ನಂಬಿ ನಷ್ಟದ ವ್ಯವಹಾರದಲ್ಲಿ ಪಾಲ್ಗೊಳ್ಳುವ ಸಾಧ್ಯತೆ. ಸಹೋದರ ವಿಶ್ವಾಸಗಳನ್ನು ಪಡೆಯಲು ಪ್ರಯತ್ನಿಸುವುದು ಸೂಕ್ತ. ನಿಮ್ಮ ಬಹುಕಾಲದ ವ್ಯಾಜ್ಯಗಳಿಗೆ ಸೂಕ್ತ ಪರಿಹಾರಗಳು ದೊರಕಲಿದೆ.

ಶುಭದಿನ 25. ವಿಷ್ಣು ಸಹಸ್ರನಾಮ ಪಠಿಸಿರಿ.




ನಿರುದ್ಯೋಗಿಗಳಿಗೆ ಉದ್ಯೋಗಾವಕಾಶ. ಬ್ಯಾಂಕಿಂಗ್ ವ್ಯವಹಾರಗಳು ಯೋಜಿತವಾಗಿ ನಡೆಯಲಿದೆ. ಪ್ರೀತಿಪಾತ್ರರಿಗೆ ಉಡುಗೊರೆಗಳನ್ನು ನೀಡುವ ಸಾಧ್ಯತೆ ಇದೆ. ವೈಯಕ್ತಿಕ ವಿಷಯಗಳಿಗೂ ಭಿನ್ನಾಭಿಪ್ರಾಯ ತಲೆದೋರಲಿದೆ.

ಶುಭದಿನ 26. ಹನುಮಾನ್ ಚಾಲಿಸ್ ಪಠಿಸಿರಿ.




ಆತ್ಮೀಯರ ವಿವಾದಗಳು ಹೆಚ್ಚಾಗಬಹುದು. ಭೂ ವ್ಯಾಜ್ಯಗಳಿಂದ ನಿಮ್ಮ ಮನಸ್ಥಿತಿ ಹಾಳಾಗಬಹುದು. ಕೆಲಸದ ವಿಷಯದಲ್ಲಿ ಸಮಸ್ಯೆಗಳು ಉದ್ಭವವಾಗಲಿದೆ ಆದಷ್ಟು ಸಮಸ್ಯೆಗಳನ್ನು ಆ ಕ್ಷಣದಲ್ಲೇ ಬಗೆಹರಿಸಲು ಪ್ರಯತ್ನಿಸಿ.

ಶುಭದಿನ 28. ಗಣಪತಿಗೆ 108 ದೂರ್ವಾರ್ಚನೆ ಮಾಡಿಸಿರಿ.




ಯೋಜಿತ ಕಾರ್ಯಗಳಲ್ಲಿ ವ್ಯವಸ್ಥಿತ ಕಾರ್ಯ. ಧನಾಗಮನ, ಲೇವಾದೇವಿ ವ್ಯವಹಾರಗಳಿಂದ ದೂರವಿರುವುದು ಲೇಸು. ಪ್ರೇಕ್ಷಣೀಯ ಸ್ಥಳಗಳು ಭೇಟಿ ಮಾಡುವ ಸಾಧ್ಯತೆ ಇದೆ. ಕುಟುಂಬದ ಜೊತೆಗೆ ಹೆಚ್ಚಿನ ಕಾಲ ಕಳೆಯಲಿದ್ದೀರಿ.

ಶುಭದಿನ 23. ಶ್ರೀವೆಂಕಟೇಶ್ವರ ಸ್ತೋತ್ರ ಪಠಿಸಿರಿ.




ಜನಪ್ರಿಯತೆ ಹೆಚ್ಚಾದಂತೆ ವಿರೋಧಿಗಳು ಹೆಚ್ಚಾಗಲಿದ್ದಾರೆ. ನಿಮ್ಮ ಪ್ರತಿಯೊಂದು ಕಾರ್ಯಗಳಿಗೂ ತೊಂದರೆ ನೀಡುವ ವ್ಯಕ್ತಿಗಳನ್ನು ಗುರುತಿಸಿ ಆದಷ್ಟು ದೂರವಿಡುವುದು ಒಳ್ಳೆಯದು. ವೈಯಕ್ತಿಕ ವಿಚಾರಗಳನ್ನು ಯಾರೊಂದಿಗೂ ಹಂಚಿಕೊಳ್ಳಬೇಡಿ.

ಶುಭದಿನ 28. ಲಕ್ಷ್ಮೀ ನಾರಾಯಣ ಹೃದಯ ಪಾರಾಯಣ ಮಾಡಿರಿ.




ಬಹುಮುಖ್ಯ ಕೆಲಸವನ್ನು ನೀವು ಮರೆತುಬಿಡಬಹುದು. ಆದಷ್ಟು ಕಾರ್ಯಗಳ ಬಗ್ಗೆ ಸೂಕ್ತ ಮುತುವರ್ಜಿವಹಿಸಿ. ಆರೋಗ್ಯದ ಹಿತದೃಷ್ಟಿಯನ್ನು ಮನಗಾಣಿ. ಹೊಸ ಆದಾಯ ಮಾರ್ಗ ಕಂಡುಬರಲಿದೆ.

ಶುಭದಿನ 25. ಆದಿತ್ಯ ಹೃದಯ ಪಠಿಸಿರಿ.




ವ್ಯವಹಾರದ ನಿಮಿತ್ತ ತಿರುಗಾಟ. ಆರ್ಥಿಕವಾಗಿ ಬಳಲುವಿಕೆ ಈ ವಾರ ಕಂಡುಬರಲಿದೆ. ಕಟ್ಟಡ ಕಾಮಗಾರಿಗಳಲ್ಲಿ ಹಣಕಾಸಿನ ಕುಂದುಕೊರತೆ ಕಾಡಲಿದೆ. ದೈವ ಸಂಕಲ್ಪದ ಮೊರೆಹೋಗುವ ಸಾಧ್ಯತೆ ಕಂಡು ಬರಲಿದೆ. ಭೂ ವ್ಯಾಜ್ಯಕ್ಕೆ ಶ್ರಮ ಹಾಕಲಿದ್ದೀರಿ.

ಶುಭದಿನ 28. ಚಂಡಿ ಪಾರಾಯಣ ಮಾಡಿರಿ.




ವಾರದ ಆರಂಭದಿಂದಲೇ ನಿಮ್ಮ ಕೆಲಸಗಳಿಗೆ ವೇಗ ನೀಡುತ್ತೀರಿ. ವೈವಾಹಿಕ ಜೀವನವು ಸಂತಸದಾಯಕವಾಗಿರುತ್ತದೆ. ಚರ್ಚಾಕೂಟಗಳಲ್ಲಿ ಪಾಲ್ಗೊಳ್ಳಲಿದ್ದೀರಿ. ನಿಮ್ಮ ನಿರೀಕ್ಷೆಯಂತೆ ಆರ್ಥಿಕವಾಗಿ ಪ್ರಬಲರಾಗುವ ಸಾಧ್ಯತೆ ಕಂಡುಬರುತ್ತದೆ.

ಶುಭದಿನ: 23. ಶ್ರೀ ಲಕ್ಷ್ಮೀ ನರಸಿಂಹ ಪಂಚರತ್ನ ಓದಿರಿ.




ಮಾನಸಿಕ ಕ್ಲೇಶ ಅಭಿವೃದ್ಧಿಗೆ ಮಾರಕವಾಗಬಹುದು. ಕುಟುಂಬದಲ್ಲಿ ಅಶಾಂತಿಯ ವಾತಾವರಣ. ಕೆಲರಿಂದ ನಿಮ್ಮ ಕಾರ್ಯಗಳಲ್ಲಿ ಹಸ್ತಕ್ಷೇಪ ಕಂಡುಬರುತ್ತದೆ. ವ್ಯಾವಹಾರಿಕ ಕ್ಷೇತ್ರದಲ್ಲಿ ಹಿನ್ನಡೆ ಆಗಬಹುದಾದ ಸಾಧ್ಯತೆ ಉಂಟು.

ಶುಭದಿನ 26. ಕಾಲಭೈರವನ ಸೇವೆ ಮಾಡಿರಿ.




ಉದ್ಯೋಗದಲ್ಲಿ ಉತ್ತಮ ಸ್ಥಾನಮಾನ ಸಿಗಲಿದೆ. ಸಹವರ್ತಿಗಳು ನಿಮ್ಮ ಯೋಜನೆಗಳಿಗೆ ಬೆಂಬಲ ನೀಡಲಿದ್ದಾರೆ. ಕಥೆ, ಕವನ ಅಥವಾ ಸಾಹಿತ್ಯ ಚಟುವಟಿಕೆಗಳಲ್ಲಿ ಉತ್ತಮ ಮನ್ನಣೆ ಗಳಿಸಲಿದ್ದೀರಿ. ಕೆಲವು ಅದೃಷ್ಟದ ಭಾಗ್ಯಗಳು ಒದಗಿಬರಲಿದೆ.

ಶುಭದಿನ 23. ಸೌಂದರ್ಯ ಲಹರಿ ಪಠಿಸಿರಿ.




ಅಪರಿಚಿತ ವ್ಯಕ್ತಿಗಳಿಂದ ನಷ್ಟವಾಗಬಹುದು. ನಂಬಿಕೆ ದ್ರೋಹದಂತಹ ಚಟುವಟಿಕೆಗಳು ನಡೆಯಲಿದ್ದು ಎಚ್ಚರದಿಂದಿರಿ. ವಾಹನದಲ್ಲಿ ಜಾಗೃತೆ ವಹಿಸುವುದು ಸೂಕ್ತ. ಪತ್ನಿಯೊಡನೆ ಅತಿ ಹೆಚ್ಚು ಕೋಪ ಕಲಹಗಳಲ್ಲಿ ಪಾಲ್ಗೊಳ್ಳಬೇಡಿ.

ಶುಭದಿನ 28. ಕನಕಧಾರಾ ಸ್ತೋತ್ರ ಪಠಿಸಿರಿ.




ಯೋಜನೆಗಳ ಫಲಿತಾಂಶ ವಿಳಂಬವಾಗುವ ಸಾಧ್ಯತೆ ಇದೆ. ಕೆಲಸಗಳಲ್ಲಿ ನಿಮ್ಮ ಪಾಲ್ಗೊಳ್ಳುವಿಕೆ ಉತ್ತಮ. ಕಲಿಕೆಯ ವಿಷಯಾಸಕ್ತಿ ತುಂಬ ಉತ್ತಮ ಮಟ್ಟದಲ್ಲಿ ಇರಲಿದೆ. ಸ್ನೇಹಿತರ ಜತೆಗೆ ಉತ್ತಮ ಬಾಂಧವ್ಯವನ್ನು ಬೆಳೆಸಿಕೊಳ್ಳಲು ಮುಂದಾಗಿ.

ಶುಭದಿನ 25. ಚಂಡಿ ಪಾರಾಯಣ ಮಾಡಿರಿ.

